ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016–17 ದಿನಾಂಕ: 1–8–2016

# ಪತ್ರಿಕಾ ಪ್ರಕಟಣೆ

## ಅವಧಿ ವಿಸ್ತರಣೆ

ಬೆಂಗಳೂರು, ಆಗಸ್ಟ್ 1 (ಕರ್ನಾಟಕ ವಾರ್ತೆ)

2016 ರ ಮುಂಗಾರು ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆಯಡಿ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಎಲ್ಲಾ ವರ್ಗದ ರೈತರಿಗೆ ವಿಮಾ ಕಂತು ಕಟ್ಟಿ ಯೋಜನೆಯಲ್ಲಿ ಪಾಲ್ಗೊಳ್ಳಲು ಕೊನೆಯ ದಿನಾಂಕವನ್ನು ಆಗಸ್ಟ್ 2 ರವರೆಗೆ ವಿಸ್ತರಿಸಲಾಗಿದೆ.

ಬಾಬು:ಜಿಪಿಆರ್.

## ಪೋಸ್ಟ್ ಡಿಪ್ಲೋಮಗೆ ಅರ್ಜಿ ಆಹ್ವಾನ

ಬೆಂಗಳೂರು, ಆಗಸ್ಟ್ 1 (ಕರ್ನಾಟಕ ವಾರ್ತೆ)

ಬೆಂಗಳೂರು, ಮೈಸೂರು ಮತ್ತು ಧಾರವಾಡ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಗಳಲ್ಲಿ ಉದ್ಯೋಗವಕಾಶಗಳಿಗಾಗಿ ಒಂದು ವರ್ಷದ ಅವಧಿಯ ಪೋಸ್ಟ್ ಡಿಪ್ಲೋಮಾ ಇನ್ ಟೂಲ್ ಡಿಸೈನ್ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಪ್ರೆಸ್ ಟೂಲ್ಸ್, ಪ್ಲಾಸ್ಟಿಕ್ ಮೌಲ್ಡ್ಸ್, ಪ್ರೆಷರ್ ಡೈ ಕ್ಯಾಸ್ಟಿಂಗ್ಸ್ ಡೈಸ್, ಜಿಗ್ಸ್ ಮತ್ತು ಫಿಕ್ಸ್ಚರ್ ಮುಂತಾದ ವಿಷಯಗಳನ್ನೊಳಗೊಂಡ ಒಂದು ವರ್ಷದ ಅವಧಿಯ ಪೋಸ್ಟ್ ಡಿಪ್ಲೋಮಾ ಇನ್ ಟೂಲ್ ಡಿಸೈನ್ ಪ್ರವೇಶಕ್ಕೆ ಮೆಕ್ಯಾನಿಕಲ್, ಇಂಡಸ್ಟ್ರೀಯಲ್ ಪ್ರೊಡಕ್ಷನ್, ಆಟೋ ಮೊಬೈಲ್, ಪ್ಲಾಸ್ಟಿಕ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ಮತ್ತು ಬಿ.ಇ., ಹಾಗೂ ಡಿಪ್ಲೋಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್, ಪ್ರಿಸಿಷನ್ ಮ್ಯಾನುಪ್ಯಾಕ್ಚರಿಂಗ್,

ಮೆಕೆಟ್ರಾನಿಕ್ಸ್ ವಿಷಯಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಮೇಲ್ಕಂಡ ಮೂರು ಕೇಂದ್ರಗಳಲ್ಲಿ ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಆಗಸ್ಟ್ 15 ರೊಳಗೆ ಖುದ್ದು ಅರ್ಜಿಯನ್ನು ಪಡೆದು ಸಲ್ಲಿಸಬಹುದಾಗಿದೆ.

ಬಾಬು:ಜಿಪಿಆರ್.

## ಅಂಗನವಾಡಿ ಹುದ್ದೆಗೆ ಅರ್ಜಿ ಆಹ್ವಾನ

ಬೆಂಗಳೂರು, ಆಗಸ್ಟ್ 1 (ಕರ್ನಾಟಕ ವಾರ್ತೆ)

ಸಮಗ್ರ ಶಿಶುಅಭಿವೃದ್ಧಿ ಯೋಜನೆ, ಬೆಂಗಳೂರು (ರಾಜ್ಯ) ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿರುವ ಮಹಾನಗರಪಾಲಿಕೆ ವ್ಯಾಪ್ತಿಯ 15 ಅಂಗನವಾಡಿ ಸಹಾಯಕಿಯರ ಗೌರವ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಗುರುತಿಸುವ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಸಲ್ಲಿಸಲು ಆಗಸ್ಟ್ 25 ಕಡೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃಧಿ ಯೋಜನಾಧಿಕಾರಿಗಳ ಕಚೇರಿ, ಬೆಂಗಳೂರು (ರಾಜ್ಯ) ಯೋಜನೆ, ಒಂದನೇ ಮಹಡಿ, ಬಿ.ಬಿ.ಎಂ.ಪಿ. ಬೆಂಗಳೂರು ಒನ್ ಕಟ್ಟಡ, ಹೆರಿಗೆ ಆಸ್ಪತ್ರೆ ಪಕ್ಕ, ಎನ್.ಆರ್. ಕಾಲೋನಿ, ಬೆಂಗಳೂರು – 560 019 ಇಲ್ಲಿಗೆ ಸಂಪರ್ಕಿಸಬಹುದಾಗಿದೆ.

ಬಾಬು:ಜಿಪಿಆರ್.

## ಅಂತರ್ಜಾಲದಲ್ಲಿ ಜಿ.ಪಿ.ಎಫ್. ವಿವರ ಪ್ರಕಟ

ಬೆಂಗಳೂರು, ಆಗಸ್ಟ್ 1 (ಕರ್ನಾಟಕ ವಾರ್ತೆ)

ಕರ್ನಾಟಕ ಸರ್ಕಾರ ಅಖಿಲ ಭಾರತೀಯ ಸೇವಾನಿರತ (ಐ.ಐ.ಎಸ್) ಅಧಿಕಾರಿಗಳ, ರಾಜ್ಯ ಶ್ರೇಷ್ಠ ನ್ಯಾಯಾಲಯ ನ್ಯಾಯಾಧೀಶರುಗಳ ಹಾಗೂ ರಾಜ್ಯ ಸರ್ಕಾರದ ಇತರ ಇಲಾಖಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಕರ್ನಾಟಕ ಭವಿಷ್ಯ ನಿಧಿಯ 2015–16 ವಾರ್ಷಿಕ ಲೆಕ್ಕ ತ:ಖ್ತೆಗಳನ್ನು ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಲಾಗಿದೆ. ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿಯ ವಂತಿಗೆದಾರರು ತಮ್ಮ ಸಾಮಾನ್ಯ ಭವಿಷ್ಯ ನಿಧಿಯ ವಂತಿಗೆದಾರರು ತಮ್ಮ ಸಾಮಾನ್ಯ ಭವಿಷ್ಯ ನಿಧಿಯ 2015–16 ನೇ ಸಾಲಿನ ವಾರ್ಷಿಕ ಲೆಕ್ಕ ತ:ಖ್ತೆಗಳನ್ನು ಎ.ಜಿ. ಕರ್ನಾಟಕ ಕಚೇರಿಯ ವೆಬ್‌ಸೈಟ್ http://www.agkar.cag.gov.in ವಿಳಾಸದಿಂದ

ಪಡೆಯಬಹುದಾಗಿದೆ ಎಂದು ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ), ಕರ್ನಾಟಕ, ಬೆಂಗಳೂರು ಅವರು ತಿಳಿಸಿರುತ್ತಾರೆ.

ವಂತಿಗೆದಾರರ ಅನುಕೂಲಕ್ಕಾಗಿ ಸಾಮಾನ್ಯ ಭವಿಷ್ಯ ನಿಧಿಯ ವಾರ್ಷಿಕ ಲೆಕ್ಕ ತ:ಖ್ತೆಗಳನ್ನು ಹೆಚ್.ಆರ್.ಎಮ್.ಎಸ್. ವೆಬ್‌ಸೈಟ್ ವಿಳಾಸ **http//www.hrms.karnataka.gov.in** ದಿಂದ ಸಂಬಂಧಪಟ್ಟ ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳ ಮೂಲಕವೂ (**HRMS>MENU>HOME>Mis Report>Download-GPF-Statement**) ಪಡೆದುಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗಿದೆ.

ವಂತಿಗೆದಾರರಿಗೆ ವೆಬ್‌ಸೈಟ್‌ನಿಂದ ವಾರ್ಷಿಕ ಲೆಕ್ಕ ತ:ಖ್ತೆಗಳನ್ನು ಪಡೆಯಲು ತೊಂದರೆ ಎದುರಾದಲ್ಲಿ ಈ ಕಚೇರಿಯ ಇ-ಮೇಲ್ ವಿಳಾಸ **(Agpf.kar@nic.in)** ಕ್ಕೆ ಅಥವಾ ದೂರವಾಣಿ ಸಂಖ್ಯೆ 080-22640310 ಸಂಪರ್ಕಿಸಲು ಕೋರಲಾಗಿದೆ.

ವಂತಿಗೆದಾರರು ತಮ್ಮ ವಾರ್ಷಿಕ ಲೆಕ್ಕ ತ:ಖ್ತೆಯಲ್ಲಿ ವಂತಿಗೆ ಮತ್ತು ಮುಂಗಡದ ವಿಷಯವಾಗಿ ಏನಾದರೂ ಲೋಪದೋಷಗಳು ಕಂಡುಬಂದಲ್ಲಿ ವರಿಷ್ಠ ಲೇಖಾಧಿಕಾರಿ (ಎಫ್.ಎಂ.) ಪ್ರಧಾನ ಮಹಾಲೇಖಪಾಲರ ಕಚೇರಿ, (ಲೆಕ್ಕ ಮತ್ತು ಹಕ್ಕುದಾರಿ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ) ಬೆಂಗಳೂರು ಇವರಿಗೆ ಪತ್ರ ಮುಖೇನ ತಿಳಿಸಬಹುದಾಗಿದೆ. ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ : 080-22640310/080-22640313.

ಬಾಬು:ಜಿಪಿಆರ್.

## ಗಣಕಯಂತ್ರ ಶಿಕ್ಷಣ ಪರೀಕ್ಷೆ ಫಲಿತಾಂಶ ಪ್ರಕಟ

ಬೆಂಗಳೂರು, ಆಗಸ್ಟ್ 1 (ಕರ್ನಾಟಕ ವಾರ್ತೆ)

2016ನೇ ಜುಲೈ ಮಾಹೆಯಲ್ಲಿ ನಡೆದ ಗಣಕಯಂತ್ರ ಶಿಕ್ಷಣ ಪರೀಕ್ಷೆಯ ಫಲಿತಾಂಶವನ್ನು ಇಲಾಖಾ ವೆಬ್‌ಸೈಟ್ **www.kseeb.kar.nic.in** ನಲ್ಲಿ ಆಗಸ್ಟ್ 2 ರಂದು ಬೆಳಿಗ್ಗೆ 11.00 ಗಂಟೆಗೆ ಪ್ರಕಟಿಸಲಾಗುವುದು.

ಗಣಕಯಂತ್ರ ಶಿಕ್ಷಣ ಸಂಸ್ಥೆಗಳಲ್ಲಿ ಆಗಸ್ಟ್ 3 ರಂದು ಅಪರಾಹ್ನ 4–00 ಗಂಟೆಗೆ ಫಲಿತಾಂಶವನ್ನು ಪ್ರಕಟಿಸಲು ಸಂಸ್ಥೆಯ ಮುಖ್ಯಸ್ಥರಿಗೆ ತಿಳಿಸಿದೆ.

ಬೆಂಗಳೂರು ನಗರ ಜಿಲ್ಲೆಯ ಗಣಕಯಂತ್ರ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಆಗಸ್ಟ್3 ರ<ದಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003 ವಾಣಿಜ್ಯ ಶಾಖೆಯಲ್ಲಿ ಪೂರ್ವಾಹ್ನ 11–00 ಗಂಟೆಗೆ ಫಲಿತಾಂಶ ಪಟ್ಟಿಯನ್ನು ಖುದ್ದಾಗಿ ಪಡೆದುಕೊಳ್ಳಬಹುದಾಗಿದೆ.

ಬಾಬು:ಜಿಪಿಆರ್.

# GPF STATEMENTS

Bangalore August 1(Karnataka Information)

The Accountant General (A&E), Karnataka, Park House Road, Bengaluru 560 001, informs that the **Annual Accounts Statements for the year 2015-16** relating to General Provident Fund (GPF) of the All India Service Officers (Karnataka Cadre), Judges of High Court and Employees of Government of Karnataka, have been uploaded in website.

The Accountant General (A&E) hereby informs, that the Subscribers can access their GPF Annual Accounts Statement through AG Karnataka website **http://www.agkar.cag.gov.in** and download the Annual Statement for the year 2015-16.

In addition, the GPF Annual Accounts Statements will be available for download at the Human Resource Management System (HRMS) website of Government of Karnataka http://www.hrms.karnataka.gov.in by the concerned DDOs (by accessing HRMS Menu Home MIS report download GPF statement) for the benefit of the GPF subscribers.

In case of GPF subscribers experiencing any difficulty relating to log in to the website, they may contact this office through e-mail (Agpf**.kar@nic.in**) or Phone Number **(080-22640310)**

In case of any discrepancy in accounting the subscription and withdrawals in their GPF Accounts, the Subscribers may write to Senior Accounts Officer/FM, office of the Principal Accountant General (A&E), Karnataka, Park House Road, Bengaluru – 560 001. (Contact Number – **080-22640310 & 080-22640313**)

babu/km

**ವಾರ್ತಾ ವಿಶೇಷ:**

# ತಾಯಿ ಮತ್ತು ಮಗುವಿನ ಆರೋಗ್ಯ ಸೇವೆಗಳ ಬಲವರ್ಧನೆಯ ಯೋಜನೆ

ಇದೊಂದು ಪ್ರಾಯೋಗಿಕ ಯೋಜನೆಯಾಗಿದ್ದು, ಶಿಶು ಮತ್ತು ತಾಯಂದಿರ ಮರಣ ಮತ್ತು ಅಸ್ವಸ್ಥತೆ ಕಡಿಮೆ ಮಾಡುವ ಉದ್ದೇಶ ಹೊಂದಿರುತ್ತದೆ ಹಾಗೂ ಸುಸ್ಥಿರ ಆರೋಗ್ಯ ಸೇವೆಗಳ ಬಲವರ್ಧನೆ ಕಾರ್ಯಕ್ರಮವಾಗಿರುತ್ತದೆ.

ಈ ಯೋಜನೆಯನ್ನು ಸಿಂಗಪುರ ಅಂತರರಾಷ್ಟ್ರೀಯ ಪ್ರತಿಷ್ಠಾನ ಸಿಂಗಪುರ ಆರೋಗ್ಯ ಸೇವೆಗಳು, ಪ್ರೈ. ಲಿ. ಮತ್ತು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆಯವರ ಸಂಯುಕ್ತ ಸಹಭಾಗಿತ್ವದಲ್ಲಿ ಹಮ್ಮಿಕೊಳ್ಳಲಾಗಿದೆ.

ಈಗಾಗಲೇ ಕರ್ನಾಟಕದ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ತಾಯಿ ಮಕ್ಕಳ ಸಾವು ನೋವಿನ ಪ್ರಮಾಣ ಕಡಿಮೆ ಮಾಡಲು ಹಲವಾರು ಕ್ರಮ ಕೈಗೊಂಡಿದ್ದು, ತಾಯಿ ಮತ್ತು ಶಿಶು ಮರಣ ದರ ಇವೆರಡರನ್ನು ಮತ್ತಷ್ಟು ಕಡಿಮೆ ಮಾಡುವ ಗುರಿ ಹೊಂದಿರುತ್ತದೆ.

ಕರ್ನಾಟಕ ಆಯ್ದ ಕೆಲವು ಆಸ್ಪತ್ರೆಗಳಲ್ಲಿ ಈಗಾಗಲೇ ಅಧ್ಯಯನ ನಡೆಸಿದ್ದು, ಕಂಡುಬಮದ ಪೂರಕ ಧನಾತ್ಮಕ ಅಂಶಗಳನ್ನು ಹಾಗೂ ಕುಂದುಕೊರತೆಗಳನ್ನು ಪರಿಗಣಿಸಿ ತಾಯಿ ಮತ್ತು ಶಿಶು ಮರಣಕ್ಕೆ ಕಾರಣವಾಗಿರುವ ಅಂಶಗಳನ್ನು ನಿವಾರಿಸುವ ನಿಟ್ಟಿನಲ್ಲಿ ಒಂದು ಉತ್ತಮವಾದ ಕಾರ್ಯಯೋಜನೆಯನ್ನು ಸಿದ್ಧಪಡಿಸಿದ್ದು, ಒಂದು ಸಂತೋಷದಾಯಕ ಸಂಗತಿಯಾಗಿರುತ್ತದೆ. ಈ ಕಾರ್ಯಕ್ರಮವು 3 ವರ್ಷದ ಯೋಜನೆಯಾಗಿದ್ದು, ತೊಡಕಿನ ಗರ್ಭಿಣಿಯರನ್ನು ಗುರ್ತಿಸಿ ನಿರ್ವಹಣೆ, ಪ್ರಸೂತಿ ನಿರ್ವಹಣೆ, ನವಜಾತ ಶಿಶು ಶೈಶಾವಸ್ಥೆಯ ತುರ್ತು ಸ್ಥಿತಿಗಳ ವ್ಯವಸ್ಥಿತ ನಿರ್ವಹಣೆಗೆ ಬೇಕಾದ ಜ್ಞಾನ ಮತ್ತು ಕೌಶಲ್ಯಗಳನ್ನು ವೃದ್ಧಿಸಿ ಗರ್ಭಿಣಿ ಮತ್ತು ಶಿಶುಗಳಿಗೆ ಉತ್ತಮ ಗುಣಮಟ್ಟದ ಸೇವೆಗಳನ್ನು ಕೈಗೆಟಕುವಂತೆ ತಲುಪಿಸಲು ಆರೋಗ್ಯ ಸಿಬ್ಬಂದಿಗಳ ಸಾಮರ್ಥ್ಯವನ್ನು ಹೆಚ್ಚಿಸಿ ವಿಶ್ವಾಸಾರ್ಹ ಸೇವೆಗಳನ್ನು ಒದಗಿಸುವ ಉದ್ದೇಶ ಹೊಂದಿರುತ್ತದೆ.

ಅದರಂತೆ ತಾಯಿ ಮತ್ತು ಶಿಶುವಿನ ಸಾವು ನೋವಿನ ಪ್ರಮಾಣವನ್ನು ಕಡಿಮೆ ಮಾಡುವ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ.

ಯೋಜನೆಯ ಅವಧಿಯಲ್ಲಿ ಸಿಂಗಪೂರ ಬಹುಮುಖ ಪ್ರತಿಭೆ ಆರೋಗ್ಯ ಸೇವೆಯ ಪ್ರಸೂತಿ ತಜ್ಞರು, ನವಜಾತ ಶಿಶು ತಜ್ಞರು, ಹಿರಿಯ ಶುಶ್ರೂಷಕರು ದಾದಿಗಳನ್ನೊಳಗೊಂಡ ತಂಡವು ಕರ್ನಾಟಕದ ವಿವಿಧ 2ನೇಮತ್ತು 3ನೇ ಹಂತದ ಆಸ್ಪತ್ರೆಗಳ ಸುಮಾರು 200 ವಿವಿಧ ಆರೋಗ್ಯ ಸಿಬ್ಬಂದಿಗಳಿಗೆ ತರಬೇತಿ ನೀಡಲಿದ್ದಾರೆ. ಈ ತಜ್ಞರ ತಂಡ ಶಿಶು ಮತ್ತು ತಾಯಿ ಮರಣಕ್ಕೆ ಕಾರಣವಾಗಿರುವ ಅಂಶಗಳನ್ನು ನಿವಾರಿಸಲು ಬೇಕಾಗಿರುವ ಜ್ಞಾನಾಭಿವೃದ್ಧಿ, ಕೌಶಲ್ಯಗಳನ್ನು ಕಲಿಕೆಯ ಮುಖಾಂತರ ತರಬೇತುದಾರರ ಕಾರ್ಯಗಾರದಲ್ಲಿ (ಟಿ.ಒ.ಟಿ) ಮೂಲಕ ಅಣಿಗೊಳಿಸುತ್ತಾರೆ. ಪ್ರತಿ ತಂಡದಿಂದ ಆಯ್ಕೆಯಾದ 40 ಯಶಸ್ವಿ ತರಬೇತುದಾರರು, ರಾಜ್ಯದ 200 ಆರೋಗ್ಯ ಸಿಬ್ಬಂದಿ ವರ್ಗದವರು ತರುವಾಯ ತಮ್ಮ ಆಸ್ಪತ್ರೆಗಳನ್ನು ಇದೇ ರೀತಿ ಕೆಲ ಹಂತದ ತರಬೇತಿ ನೀಡಿ ಜ್ಞಾನ, ಕೌಶಲ್ಯ ಕಲಿಕೆಗೆ ಒತ್ತು ನೀಡಲಿದ್ದಾರೆ.

ತೊಡಕಿನ ಗರ್ಭಿಣಿಯರನ್ನು ಗುರುತಿಸಿ, ನಿರ್ವಹಣಾ ಸಾಮರ್ಥ್ಯ ಹೆಚ್ಚಿಸುವಿಕೆ, ಹೆರಿಗೆ ಮತ್ತು ನವಜಾತ ಶಿಶುವಿನ ತುರ್ತು ಸ್ಥಿತಿ ನಿರ್ವಹಣೆ, ಆರೈಕೆ ಗುಣಮಟ್ಟ ಕಾಯ್ದುಕೊಳ್ಳುವುದು. ವೈದ್ಯಕೀಯ ಚಿಕತ್ಸಾ ಗುಣಮಟ್ಟ ಹಾಗೂ ನಿರ್ವಹಣೆಯನ್ನು ಹೆಚ್ಚಿಸಿ, ತಾಯಿ ಮಗುವಿನ ಸಾವು–ನೋವು ಪ್ರಮಾಣ ಕಡಿಮೆ ಮಾಡುವುದು ಈ ಮೂರು ಮುಖ್ಯ ಸಂಗತಿಗಳಾಗಿವೆ.

ಇದೊಂದು ಪ್ರಾಯೋಗಿಕ ಯೋಜನೆಯಾಗಿದ್ದು, ಕರ್ನಾಟಕ ಸುಮಾರು 1.00 ಲಕ್ಷಕ್ಕೂ ಹೆಚ್ಚಿನ ಗರ್ಭಿಣಿಯರು ಮತ್ತು ನವಜಾತ ಶಿಶುಗಳು ಈ ಯೋಜನೆಯ ಲಾಭವನ್ನು ಪಡೆಯಲಿದ್ದಾರೆಂದು ಅಂದಾಜಿಸಲಾಗಿದೆ.

<u>ಈ ಯೋಜನೆಯ ಮೂರು ಮುಖ್ಯ ಪಥಗಳು:</u>

ಈ ಯೋಜನೆಯನ್ನು ಚಿಕತ್ಸಾತ್ಮಕ ಪಥ, ನಿರ್ವಹಣಾತ್ಮಕ ಪಥ ಮತ್ತು ವೈದ್ಯ ವೃತ್ತಿ ಬಾಂಧವರೊಡನೆ ಅನುಭವ ಹಂಚಿಕೊಳ್ಳುವ ವಿಚಾರ ವಿನಿಮಯ ಮಾಡುವ ಪಥ ಎಂಬ ಮೂರು ಅಂಶಗಳನ್ನು ಹೊಂದಿದೆ.

ಸಿಂಗಪೂರದ ವಿವಿಧ ತಜ್ಞರ ತಂಡದಿಂದ ಪ್ರಸೂತಿ ಮತ್ತು ಹೆರಿಗೆ ವಿಭಾಗ, ಮಕ್ಕಳ ವಿಭಾಗದ ಸರಣಿ ತರಬೇತಿ ಕಾರ್ಯಾಗಾರ, ಗುಂಪು ಚರ್ಚೆ Symposium ಹಾಗೂ ವೈಜ್ಞಾನಿಕ ಸಭೆಗಳ ಮೂಲಕ ವಿಚಾರ ವಿನಿಮಯ ಮಾಡಲಾಗುತ್ತದೆ. ಹಾಗೆಯೇ ಸಿಂಗಾಪುರಕ್ಕೆ ಅನುಭವ ಹಂಚಿಕೊಳ್ಳಲು ಮತ್ತು ಗುಣಮಟ್ಟ ಅಭ್ಯಸಿಸಲು ಒಂದು ಅಧ್ಯಯನ ಪ್ರವಾಸವನ್ನು ಸಹ ಏರ್ಪಡಿಸಿರುತ್ತಾರೆ.

ಅದರಂತೆ ಗರ್ಭಿಣಿ ಮತ್ತು ನವಜಾತ ಶಿಶುಗಳ ಆರೈಕೆಗೆ ಸಂಬಂಧಿಸಿದ ತರಬೇತಿ ಗುಣಮಟ್ಟವನ್ನು ಹೆಚ್ಚಿಸುವಿಕೆ.

<u>ಉದಾಹರಣೆಗೆ:</u>

* ಕೃತಕ ಮಾದರಿಗಳ ಮೂಲಕ ಹೆಚ್ಚಿನ ಪ್ರಾತ್ಯಕ್ಷಿಕೆ ಹಾಗೂ ಅಣುಕು ಪ್ರದರ್ಶನ.
* ಇತ್ತೀಚಿನ ವಿಷಯಗಳನ್ನು ಆಚರಣೆಗೆ ಅಳವಡಿಸಿಕೊಳ್ಳುವಿಕೆ.
* ವೈದ್ಯರು ಮತ್ತು ಶುಶ್ರೂಷಕಿಯರ ಮಧ್ಯೆ ಸಂವಹನ, ಸಮನ್ವಯ ಬಲಪಡಿಸುವಿಕೆ.
* ಪರಿಣಾಮಕಾರಿ ಸೋಂಕು ತಡೆಗಟ್ಟುವ ಚಟುವಟಿಕೆಗಳ ಅನುಷ್ಠಾನ.
* ವೈದ್ಯಕೀಯ ದಾಖಲಾತಿ ಬಲಪಡಿಸುವಿಕೆ.

<u>ಯೋಜನಾ ವಿನ್ಯಾಸ:</u>

ಈ ಯೋಜನೆಯಲ್ಲಿ ಬೆಂಗಳೂರಿನ ತಾಯಿ ಮಕ್ಕಳ ಆರೋಗ್ಯದ ವೃತ್ತಿ ಬಾಂಧವರನ್ನು ಅಳವಡಿಸಿಕೊಂಡು ಸರಣಿ ಉಪನ್ಯಾಸ, ಕಾರ್ಯ ಚಟುವಟಿಕೆ ಮೂಲಕ ಸಮಸ್ಯೆಗಳ ಚರ್ಚೆ ಮಾಡಲಿದೆ. ಇದರಲ್ಲಿ ನಾಯಕರು ಹಿರಿಯ/ಕಿರಿಯ ವೈದ್ಯ ಸಿಬ್ಬಂದಿಗಳು ಹಾಗೂ ತಾಯಿ ಮಕ್ಕಳ ಆರೋಗ್ಯ ಕಾರ್ಯಕರ್ತರು ಮೂರು ಪಥಗಳಲ್ಲಿ ಸೇರಿಕೊಂಡಿರುತ್ತಾರೆ. ಕೆಳಕಂಡ ಚಿತ್ರದಲ್ಲಿ ಮೂರು ಪಥದ ಭಾಗಗಳನ್ನು ತೋರಿಸಿದೆ. ಶೇ 80% ಯೋಜನೆಯ ಸಂಪನ್ಮೂಲಗಳನ್ನು ಚಿಕಿತ್ಸಾ ಪಥಕ್ಕೆ ಹೊಂದಿದ್ದು, ಉಳಿದ ಶೇ 20% ಇತರೆ ಪಥಗಳಿಗೆ ಮೀಸಲಿಡಲಾಗಿದೆ.

<u>ಚಿಕಿತ್ಸಾ ಪಥ:</u>

ಇದರಲ್ಲಿ ನಾಲ್ಕು ಟಿ.ಓ.ಟಿ. ತರಬೇತುದಾರರಿಂದ ತರಬೇತಿ ಕಾರ್ಯಾಗಾರಗಳಿದ್ದು, ನಂತರ ಒಂದು ಅಧ್ಯಯನ ಭೇಟಿಯಿದ್ದು, ಎರಡು ವರ್ಷದ ಅವಧಿಯಾಗಿರುತ್ತದೆ. 2ನೇ ಮತ್ತು 3ನೇ ಹಂತದ ಆಸ್ಪತ್ರೆಗಳ ಓ.ಬಿ.ಜಿ./ಹೆರಿಗೆ ವಾರ್ಡ್ ನವಜಾತ ಶಿಶು ವಿಭಾಗದ ವೈದ್ಯರು, ಸ್ನಾತಕೋತ್ತರ ವಿದ್ಯಾರ್ಥಿಗಳು, ಶುಶ್ರೂಷಕಿಯರು, ನವಜಾತ ಶಿಶುನಿವಾಸಿ ವೈದ್ಯರುಗಳಿದ್ದು, ಶೇ 75 ರಷ್ಟು ಶುಶ್ರೂಷಕಿಯರು ಓ.ಬಿ.ಜಿ. ವಾರ್ಡ್‌ನಿಂದ ಬಂದಿರುತ್ತಾರೆ. ಎಲ್ಲಾ ಕಾರ್ಯಾಗಾರದಲ್ಲಿ ಹೊಸ ತಂಡ ಇರುತ್ತದೆ. ಅಂತೆಯೇ ಎರಡು ವರ್ಷದ ಕೊನೆಯಲ್ಲಿ 200 ವೈದ್ಯಕೀಯ ಸಿಬ್ಬಂದಿಗಳು ತರಬೇತಿ ಹೊಂದಿರುತ್ತಾರೆ. ಈ ಅವಧಿಯಲ್ಲಿ ಅವರು ತಮ್ಮ ಆಸ್ಪತ್ರೆಯಲ್ಲಿ ಕೆಳಹಂತದವರೆಗೆ ತರಬೇತಿಯನ್ನು ನೀಡಬೇಕಾಗಿರುತ್ತದೆ. ಸಿಂಗಪೂರದ

ಅಂತರರಾಷ್ಟ್ರೀಯ ಸ್ವಪ್ರೇರಿತ ವಿವಿಧ ವೈದ್ಯರ ತಂಡ ಮೂರು ದಿನದ ಟಿ.ಓ.ಟಿ. ಕಾರ್ಯಾಗಾರವನ್ನು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆಯಲ್ಲಿ ನಡೆಸಿಕೊಡಲಿದೆ.

ತರಬೇತಿ ಕಾರ್ಯಾಗಾರದಲ್ಲಿ ಸರಣಿ ಉಪನ್ಯಾಸಗಳು, ಆಚರಣೆಗೆ ತರಬಹುದಾದ ತರಬೇತಿ ಶಿಬಿರ, ತರಬೇತಿ **Manikin/Medical Kit** ಗಳು ಹಾಗೂ ಕೌಶಲ್ಯಾಧಾರಿತ ನಿಲ್ದಾಣಗಳಿತ್ತದೆ. ಕೃತಕ ಮಾದರಿಗಳನ್ನು ಬಳಸಿ ತರಬೇತಿ, ಅಣಕು ಪ್ರದರ್ಶನ, ಕೌಶಲ್ಯಾಭಿವೃದ್ಧಿಗೆ ತರಬೇತಿಯಲ್ಲಿ ಹೆಚ್ಚಿನ ಮಹತ್ವ ನೀಡಲಾಗಿದೆ. ರೂಢಿಯಂತೆ ತರಬೇತಿ ಕೈಪಿಡಿ, **Slide/Video** ಗಳನ್ನು ತರಬೇತುದಾರರು ವಿನ್ಯಾಸಗೊಳಿಸಿ ಅಭಿವೃದ್ಧಿಗೊಳಿಸಿರುತ್ತಾರೆ.

**<u>ತರಬೇತಿಯ ಕೊನೆಯಲ್ಲಿ ತರಬೇತಿ ಪಡೆದವರು ಈ ಕೆಳಕಂಡ ಸಾಮರ್ಥ್ಯ ಹೊಂದಿರುತ್ತಾರೆ.</u>**

1. ಅವರವರ ಆಸ್ಪತ್ರೆಗಳಲ್ಲಿ ಹೆರಿಗೆ ನಂತರ ರಕ್ತಸ್ರಾವ, ಪ್ರಸೂತಿ ನಂತರ ಸೋಂಕು ದಾಖಲಾತಿ/ದತ್ತಾಂಶ ಸಂಗ್ರಹಣೆ ಮಾಡಬಲ್ಲವರಾಗಿರುತ್ತಾರೆ.
2. ತೊಡಕಿನ ಗರ್ಭಿಣಿಯರನ್ನು ಗುರುತಿಸಿ ನಿಗಾವಣೆ ಮಾಡುವುದು ಸಮಯೋಚಿತ, ಸಮರ್ಪಕ ನಿರ್ವಹಣೆ ಮಾಡಬಲ್ಲವರಾಗಿರುತ್ತಾರೆ.
3. ಹೆರಿಗೆಯ ತುರ್ತು ಸಂದರ್ಭಗಳನ್ನು ಬೇಗನೆ ಗುರುತಿಸಿ ಪರಿಣಾಮಕಾರಿ ನಿರ್ವಹಣೆ ಮಾಡುತ್ತಾರೆ.
4. ಅವರವರ ಆಸ್ಪತ್ರೆಗಳ ಸೋಂಕು ನಿರ್ವಹಣೆ ಹಾಗೂ ಉಸಿರು ಕಟ್ಟಿದ ಮಗುವಿನ ತೊಂದರೆ, ಅಂಕಿ–ಅಂಶಗಳ ದಾಖಲಾತಿ ಮತ್ತು ದತ್ತಾಂಶ ಸಂಗ್ರಹಣೆ.
5. ಸೋಂಕು ತಡೆಗಟ್ಟಲು ಪರಿಣಾಮಕಾರಿ ಸೂತ್ರಗಳನ್ನು ಆಚರಣೆಗೆ ತರುವುದು. ನವಜಾತು ಶಿಶುವಿನ ಪುನಶ್ಚೇತನ ಹಾಗೂ ಪುನಶ್ಚೇತನ ಉಪಕರಣಗಳ ಸಮರ್ಪಕ ಬಳಕೆ ಪ್ರಾತ್ಯಕ್ಷಿಕೆ.

2. <u>ನಿರ್ವಹಣಾ ಪಥ:</u>

ಸಿಂಗಪೂರದ ತಜ್ಞರ ತಂಡದಲ್ಲಿರುವ ಪ್ರಸೂತಿ ತಜ್ಞರು/ನವಜಾತ ತಜ್ಞರು ಹಾಗೂ ವ್ಯವಸ್ಥಾಪಕ ಶುಶ್ರೂಷಕಿಯರು, ಓ.ಬಿ.ಜಿ. ಮತ್ತು ಮಕ್ಕಳ ವಾರ್ಡ್‌ನ ಜೊತೆ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯವಸ್ಥೆಗಳ ಚರ್ಚೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಆಸ್ಪತ್ರೆಗಳ ಆಯ್ದ ವ್ಯಕ್ತಿಗಳ ಜೊತೆ ನಡೆಸುತ್ತಾರೆ. ಪ್ರಸೂತಿ, ನವಜಾತ ಶಿಶುಗಳ ಚಿಕಿತ್ಸಾ ನಿಯಮಗಳು, "ಗುಣಮಟ್ಟ ನಿರ್ವಹಣಾ ಚೌಕಟ್ಟು ಹಾಗೂ ಮಾರ್ಗಸೂಚಿಗಳ ಹಾಗು ನವಜಾತ ಶಿಶುಗಳ ಸುರಕ್ಷಿತ ಸಾಗಣೆ ವ್ಯವಸ್ಥೆ ಬಗ್ಗೆ ಸಹ ಎಸ್.ಐ.ವಿ. ಗಳ ಸಲಹೆ ನೀಡಿ ವಿಚಾರ ವಿನಿಮಯ ಮಾಡಲಿದ್ದಾರೆ.

ಚರ್ಚೆಯು ಮೂರು ಅಧಿವೇಶನದಲ್ಲಿ ಜರುಗಲಿದ್ದು, ಒಂದೊಂದು ಕಾರ್ಯಾಗಾರದಲ್ಲಿ ಒಂದು ತಂಡದಂತೆ ಎರಡು, ಮೂರು ಹಾಗೂ ನಾಲ್ಕು ತಂಡಕ್ಕೆ ನಡೆಯಲಿದೆ.

3. ವೈದ್ಯರು ವೃತ್ತಿ ಬಾಂಧವರೊಡನೆ ಅನುಭವ ಹಂಚಿಕ ಪಥ:

ಈ ಮೂರು ಸಂಸ್ಥೆಗಳನ್ನೊಳಗೊಂಡ ಸಹಭಾಗಿತ್ವವು ಕರ್ನಾಟದಲ್ಲಿ ಒಂದು ವಿಚಾರಗೋಷ್ಠಿಯ ಮುಖಾಂತರ ಉತ್ತಮ ವಿಧಾನಗಳನ್ನು ಹಾಗೂ ಕಲಿಯುವ ಮಾರ್ಗಗಳನ್ನು ವಿನಿಮಯ ಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ. ಸಿಂಗಪೂರ ಶಿಶು ಮತ್ತು ಮಕ್ಕಳ ಆರೋಗ್ಯ ಸೇವೆಗಳ ಬಗ್ಗೆ ಜ್ಞಾನಾರ್ಜನೆ ಮತ್ತು ಅನುಭವಗಳನ್ನು ತಿಳಿಯಲು ಸಿಂಗಪೂರಕ್ಕೆ ಕರ್ನಾಟಕದಿಂದ ಒಂದು ತಂಡದ ವ್ಯಾಸಂಗ ಪ್ರವಾಸವನ್ನು ಸಹ ಏರ್ಪಡಿಸಲಾಗುವುದು.

ಬಾಬು:ಜಿಪಿಆರ್.